ಕೊಡಗು ಜಿಲ್ಲೆಯ ಮಾಜಿ ಪಟೇಲರ ಪಿಂಚಣಿ ಬಗ್ಗೆ

57 (41) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿನ ಪಟೇಲರಿಗೆ ಕಳೆದ 2 ವರ್ಷಗಳಿಂದ ಪಿಂಚಣಿ ಹಣ ನೀಡದಿರಲು ಕಾರಣವೇನು; ಯಾವಾಗ ಪಿಂಚಣಿ ಹಣ ಮಂಜೂರು ಮಾಡಲಾಗುವುದು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿನ ಅನುವಂಶಿಕ ಪಟೇಲರ ಪಿಂಚಣಿಯನ್ನು ನವಂಬರ್–2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರೂ.500 ರಿಂದ 1000/– ರೂ.ಗಳಿಗೆ ಹೆಚ್ಚಿಸಿ ಈ ವೆಚ್ಚವನ್ನು ಲೆಕ್ಕಶೀರ್ಷಿಕೆ: **2029–00–101–1–01–015**(ಯೋಜನೇತರ) ರಡಿಯಲ್ಲಿ ಭರಿಸಲು ಆದೇಶಿಸಲಾಗಿತ್ತು. ಸದರಿ ಲೆಕ್ಕಶೀರ್ಷಿಕೆಯಲ್ಲಿ ಅನುದಾನದ ಕೊರತೆ ಕಂಡುಬಂದ ಕಾರಣ ಪಿಂಚಣಿ ಪಾವತಿಸುವುದು ವಿಳಂಬವಾಗಿತ್ತು.

ಸರ್ಕಾರವು ದಿನಾಂಕ: 11.01.2010 ತಿದ್ದುಪಡಿ ಆದೇಶ ಸಂಖ್ಯೆ: ಕಂಇ **132 ಎಂವಿಎಸ್ 2009,** ರನ್ವಯ ಮಾಜಿ ಪಟೇಲರ ಪಿಂಚಣಿ ಪಾವತಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ:**2071–01–200–0–06** ರಡಿಯಲ್ಲಿ ಭರಿಸಲು ಸೂಚಿಸಿದ್ದರ ಮೇರೆಗೆ, ಮಾಜಿ ಪಟೇಲರಿಗೆ ಪಿಂಚಣಿ ಪಾವತಿಸಲು ಕೊಡಗು ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳಿಗೂ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದು ದಿ: 31.03.2010 ರೊಳಗೆ ಅನುಕಂಪ ಭತ್ಯೆ ನೀಡಲು ಕ್ರಮ ವಹಿಸಲಾಗುವುದು.

ಭೂಸ್ವಾಧೀನ ಪ್ರಕ್ರಿಯೆ

575 (539) ಶ್ರೀ ಅಶ್ವತ್ಥ್ ಎಂ.ಸಿ. (ಚನ್ನಪಟ್ಟಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿ. ದೊಡ್ಡಮಾರನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳನ್ನು ಕೆಐಎಡಿಬಿ ಯವರು ಕೈಗಾರಿಕಾ ಅಭಿವೃದ್ಧಿಗಾಗಿ ಪ್ರಾಥಮಿಕ ಅಧಿಸೂಚನೆ